ದಿನಾಂಕ : 14-11-2025 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ**

7. ಈ ಪ್ರಕರಣದಲ್ಲಿ ಜಪ್ತಾದ ದ್ವಿಚಕ್ರ ವಾಹನ ಸಂಖ್ಯೆ ಕೆಎ-23/ಇಜೆ-3097 ಹೊಂಡಾ ಪ್ಯಾಶನ್ ಪ್ರೋ ಬಿ.ಎಸ್.3 ವಾಹನದ ಫೋಟೋವನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಈ ವಾಹನವನ್ನು ನ್ಯಾಯಾಲಯದ ಆದೇಶದ ಮೇರೆಗೆ 4 ನೇ ಆರೋಪಿ ನ್ಯಾಯಾಲಯಕ್ಕೆ ಮುಚ್ಚಳಿಕೆ ಬರೆದುಕೊಟ್ಟು ತಮ್ಮ ಮಧ್ಯಂತರ ವಶಕ್ಕೆ ಬಿಡಿಸಿಕೊಂಡಿರುವುದು ದಾಖಲೆಗಳಲ್ಲಿ ಕಂಡುಬಂದಿರುತ್ತದೆ. ದಂಡ ಪ್ರಕ್ರಿಯ ಸಂಹಿತೆ ಕಲಂ 313 ರ ಅಡಿಯಲ್ಲಿ 4 ನೇ ಆರೋಪಿಯನ್ನು ವಿಚಾರಿಸಲಾಗಿ 4 ನೇ ಆರೋಪಿಯು ಮುಚ್ಚಳಿಕೆಯ ಮೇಲಿರುವ ಸಹಿಯನ್ನು ಗುರುತಿಸಿದ್ದಾರೆ. ಮುಚ್ಚಳಿಕೆಯ ಮೇಲಿರುವ 4 ನೇ ಆರೋಪಿಯ ಸಹಿಯನ್ನು ನಿಪಿ-5 [ಎ] ಎಂದು ಗುರುತಿಸಲಾಯಿತು. ಫೋಟೋದಲ್ಲಿ ಕಾಣುವ ದ್ವಿಚಕ್ರ ವಾಹನ ಸಂಖ್ಯೆ ಕೆಎ-23/ಇಜೆ-3097 ಹೊಂಡಾ ಪ್ಯಾಶನ್ ಪ್ರೋ ಬಿ.ಎಸ್.3 ಸಾಕ್ಷಿಯಾಗಿ ಗುರುತಿಸಲು ಆರೋಪಿ ಪರ ವಕೀಲರು ಸಹಮತಿಯನ್ನು ನೀಡಿದ್ದಾರೆ. ಆ ಕಾರಣ ಫೋಟೋದಲ್ಲಿ ಕಾಣುವ ದ್ವಿಚಕ್ರ ವಾಹನ ಸಂಖ್ಯೆ ಕೆಎ-23/ಇಜೆ-3097 ಹೊಂಡಾ ಪ್ಯಾಶನ್ ಪ್ರೋ ಬಿ.ಎಸ್.3 ವಾಹನವನ್ನು ಮು.ಮಾಃ 2 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ. ಎ.ಸಿ.ಪಿ ವಕೀಲರಿಂದ**

ಈ ಹಂತದಲ್ಲಿ ಆರೋಪಿತರ ಪರ ವಕೀಲರು ಪಾಟೀ ಸವಾಲು ಮಾಡಲು ಸಮಯಾವಕಾಶ ಕೋರಿದ್ದು, ಕೋರಿಕೆಯ ಮೇರೆಗೆ ಪಾಟೀ ಸವಾಲಿಗಾಗಿ ಪ್ರಕರಣವನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಸವಿತಾ ಕುಮಾರಿ ಎನ್)
3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಬೆಳಗಾವಿ.